ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	973(975)
ಸದಸ್ಯರ ಹೆಸರು	ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	15-03-2021
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಪ್ರಶ್ನೆ	ಉತ್ತರ
ಅ) ರಾಜ್ಯದಲ್ಲಿ ಸರ್ಕಾರಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡುತ್ತಾ ಬಂದಿದ್ದು, 1986 ರಿಂದ ಸ್ಥಗಿತಗೊಳಿಸಿರುವುದು ನಿಜವೇ; 2006ರಲ್ಲಿದ್ದ ಸಮ್ಮಿಶ್ರ ಸರ್ಕಾರ 2008ರಲ್ಲಿದ್ದ ಸರ್ಕಾರ 1993 ರಿಂದ 1995ರವರೆಗೆ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳಿಗೆ ಅನುದಾನವನ್ನು ನೀಡಿರುವುದೇ;	ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಪಿಎಂಸಿ 2006, ದಿನಾಂಕ:06-10-2007ರನ್ವಯ ದಿನಾಂಕ:01-06-1987 ರಿಂದ 1992-93ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಮತ್ತು ಇಡಿ 217 ಪಿಎಂಸಿ 2008 ದಿನಾಂಕ:08-09-2008ರನ್ವಯ 1993-94 ಮತ್ತು 1994-95ನೇ ಶೈಕ್ಷಣಿಕ ಸಾಲುಗಳ ಅವಧಿಯಲ್ಲಿ ಪ್ರಾರಂಭಿಸಿ ವಿಚ್ಛಿನ್ನತೆಯಿಲ್ಲದೆ ನಡೆಸಲಾಗುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸಹಾಯಾನುದಾನ ನೀಡಲಾಗಿದೆ.
ಆ) 2008 ರಿಂದ ಅಧಿಕಾರಕ್ಕೆ ಬಂದ ಸರ್ಕಾರಗಳು 1995ರ ನಂತರ ಪ್ರಾರಂಭವಾದ ಅನುದಾನರಹಿತ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳನ್ನು ಅನುದಾನಕ್ಕೊಳಪಡಿಸದಿರುವುದು ಕನ್ನಡ ಭಾಷೆಗೆ ಮಾಡಿರುವ ಅಪಮಾನವಲ್ಲವೇ;	1995-2000 ಹಾಗೂ 2001-2005ರವರೆಗೆ ಶಾಶ್ವತ ಅನುದಾನರಹಿತವಾಗಿ ಪ್ರಾರಂಭವಾಗಿರುವ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ ನಮ್ಮ ಅಧ್ಯಕ್ಷತೆಯಲ್ಲಿ ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಹಾಲಿ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ರವರ ಸಮ್ಮುಖದಲ್ಲಿ ಸಭೆಯನ್ನು ಏರ್ಪಡಿಸಿ. ಸದರಿ ಸಭೆಯಲ್ಲಿ 1995-2000 ಹಾಗೂ 2001-2005ರವರೆಗೆ ಶಾಶ್ವತ ಅನುದಾನರಹಿತವಾಗಿ ಪ್ರಾರಂಭವಾಗಿರುವ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ ಪ್ರತಿ 5 ವರ್ಷದ ಬ್ಲಾಕ್ ಅವಧಿಯಲ್ಲಿ ಪ್ರಾರಂಭಿಸಲಾಗಿರುವ ಶಾಲಾ ಕಾಲೇಜುಗಳು ಎಷ್ಟು ಮತ್ತು ಸದರಿ ಶಾಲಾ ಕಾಲೇಜುಗಳಲ್ಲಿ ಎಷ್ಟು ಶಿಕ್ಷಕರು/ಉಪನ್ಯಾಸಕರುಗಳು/ಬೋಧಕೇತರುಗಳು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಇವರುಗಳನ್ನು ಅನುದಾನಕ್ಕೆ ಒಳಪಡಿಸಿದ್ದಲ್ಲಿ ವಾರ್ಷಿಕವಾಗಿ ತಗಲುವ

	ಅಂದಾಜು ವೆಚ್ಚದ ಬ್ಲಾಕ್ ಅವಧಿಯ ಮಾಹಿತಿಯನ್ನು ಆಯುಕ್ತಾಲಯಗಳು ಮತ್ತು ಪದವಿ ಪೂರ್ವ ನಿರ್ದೇಶನಾಲಯದಿಂದ ಪಡೆದು ಪರಿಶೀಲಿಸಲಾಗುತ್ತಿದೆ.
ಇ) ರಾಜ್ಯದ ಅನುದಾನರಹಿತ ಕನ್ನಡ ಶಾಲೆ ಹಾಗೂ ಕನ್ನಡ ಭಾಷೆ ಉಳಿವಿಗಾಗಿ ಸರ್ಕಾರವು ಇನ್ನಾದರೂ ಒತ್ತು ನೀಡುವುದೇ?	• ಸರ್ಕಾರದ ಅಧೀಸೂಚನೆ ಸಂಖ್ಯೆ:ಇಡಿ 274ಪಿಜಿಸಿ 2017 ದಿನಾಂಕ:21.10.2017ರಲ್ಲಿ ಕನ್ನಡ ಭಾಷಾ ಕಲಿಕಾ ನಿಯಮಗಳು 2017ನ್ನು ಜಾರಿಗೆ ತರಲಾಗಿದ್ದು, ಸದರಿ ಅಧಿನಿಯಮದನ್ವಯ ರಾಜ್ಯದ ಎಲ್ಲಾ ಪಠ್ಯಕ್ರಮದ ಶಾಲೆಗಳಲ್ಲಿ 01 ರಿಂದ 10ನೇ ತರಗತಿಯವರೆಗೆ 2017–18ನೇ ಶೈಕ್ಷಣಿಕ ವರ್ಷದಿಂದ ಸ್ವಾಭಾವಿಕ ಬೆಳವಣಿಗೆಯ ಮೇರೆಗೆ ಹಂತಹಂತವಾಗಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸುವುದು ಕಡ್ಡಾಗೊಳಿಸಲಾಗಿದೆ. • ಈ ನಿಯಮಗಳನ್ನು ಉಲ್ಲಂಘನೆ ಮಾಡಿದ ಶಾಲೆಗಳಿಗೆ ಕರ್ನಾಟಕ ಶಿಕ್ಷಣ ಅಧಿನಿಯಮ 1983ರ 128ನೇ ಪ್ರಕರಣದಲ್ಲಿ ತಿಳಿಸಿದಂತೆ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಇದೇ ಅಧಿಸೂಚನೆ ದಿನಾಂಕ:21.10.2017ರಲ್ಲಿನ ಕನ್ನಡ ಭಾಷಾ ಕಲಿಕಾ ನಿಯಮಗಳು 2017ರ ನಿಯಮ 6[4]ರನ್ವಯ ಕನ್ನಡ ಭಾಷಾ ಕಲಿಕಾ ನಿಯಮಗಳನ್ನು ಜಾರಿಗೊಳಿಸದೇ ಇರುವ ಶಾಲೆಗಳ ವಿರುದ್ಧ ಯಾವುದೇ ದೂರುಗಳು ಸ್ವೀಕೃತವಾದಲ್ಲಿ ವಿಚಾರಣೆ ನಡೆಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಈ ಮೇಲ್ಕಂಡ ಅಂಶಗಳ ಮೂಲಕ ರಾಜ್ಯದ ಎಲ್ಲಾ ಪಠ್ಯಕ್ರಮದ ಅನುದಾನ ರಹಿತ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಕಲಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ.

ಇಪಿ 66 ಪಿಎಂಸಿ 2021

S. Su

[ಎಸ್.ಸುರೇಶ್ ಕುಮಾರ್]
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು.